## ನಿಮ್ಮ ಹಿತ್ತಲಿನ ಜೀವಜಗತ್ತು

# ಚಟುವಟಿಕೆ ಹಾಳೆ I: ರಣಹದ್ದುಗಳು ಎಲ್ಲಿವೆ?

ಅ) 'ಕಣ್ಮರೆಯಾಗುತ್ತಿರುವ ರಣಹದ್ದುಗಳು' ಕಥೆಯನ್ನು ಗಮನವಿಟ್ಟು ಕೇಳಿ.

- ಕಥೆಯಲ್ಲಿ ರಣಹದ್ದುಗಳ ಬಗ್ಗೆ ನಿಮಗೆ ಕುತೂಹಲ ಮೂಡಿಸಿದ 2 ವಿಷಯಗಳನ್ನು ಬರೆಯಿರಿ. ಈ ವಿಷಯಗಳು ನಿಮಗೆ ಏಕೆ ಕುತೂಹಲ ಮೂಡಿಸಿದವು?
- ಕಥೆಯನ್ನು ಕೇಳುವಾಗ ನಿಮ್ಮ ಮನಸ್ಸಿನಲ್ಲಿ ಮೂಡಿದ ಒಂದು ಭಾವನೆಯನ್ನು ನೆನಪಿಸಿಕೊಳ್ಳಬಲ್ಲಿರಾ? ಅದನ್ನು ಬರೆಯಿರಿ.
- ಕಥೆಯಲ್ಲಿ ನಿಮಗೆ ಅರ್ಥವಾಗದ ವಿಷಯ ಯಾವುದಾದರೂ ಇದೆಯೇ? ಅಥವಾ ಕಥೆಯಲ್ಲಿ ರಣಹದ್ದುಗಳ ಜೀವನದ ಬಗ್ಗೆ ಹೇಳದ ಯಾವುದಾದರೂ ವಿಚಾರದ ಬಗ್ಗೆ ನಿಮಗೆ ಪ್ರಶ್ನೆಗಳಿವೆಯೇ? ಇದ್ದರೆ, ಅವುಗಳನ್ನು ಬರೆಯಿರಿ. ಅವುಗಳನ್ನು ನಿಮ್ಮ ಸ್ನೇಹಿತರೊಂದಿಗೆ ಮತ್ತು ತರಗತಿಯಲ್ಲಿ ಚರ್ಚಿಸಿ. ನಿಮಗೆ ಸಹಾಯ ಬೇಕಾದರೆ, ನಿಮ್ಮ ಶಿಕ್ಷಕರನ್ನು ಕೇಳಿ.

ಆ) ಭಾರತದಲ್ಲಿ ಒಂಬತ್ತು ವಿವಿಧ ಪ್ರಭೇದಗಳ ರಣಹದ್ದುಗಳು ಕಂಡುಬರುತ್ತವೆ. ಇವುಗಳಲ್ಲಿ ಬಹುತೇಕ ಅಳಿವಿನಂಚಿಗೆ ತಲುಪಿರುವ ಮೂರು ಪ್ರಭೇದಗಳ ರಣಹದ್ದುಗಳ ಚಿತ್ರಗಳನ್ನು ಇಲ್ಲಿ ನೀಡಲಾಗಿದೆ. ಇವುಗಳನ್ನು ಹೀಗೆ ಕರೆಯಲಾಗುತ್ತದೆ: (ಅ) ಉದ್ದ ಕೊಕ್ಕಿನ ರಣಹದ್ದು (Long-billed vulture), (ಆ) ಸಣ್ಣ ಕೊಕ್ಕಿನ ರಣಹದ್ದು (Slender-billed vulture), ಮತ್ತು (ಇ) ಬಿಳಿ ಬೆನ್ನಿನ ರಣಹದ್ದು (White-rumped or White-backed vulture). ಈ ಚಿತ್ರಗಳನ್ನು ಕೆಲವು ನಿಮಿಷಗಳ ಕಾಲ ಎಚ್ಚರಿಕೆಯಿಂದ ಗಮನಿಸಿ. ಇವುಗಳಲ್ಲಿ ನೀವು ಗಮನಿಸಿದ ಅಂಶಗಳನ್ನು ದಾಖಲಿಸಲು ಮುಂದಿನ ಪುಟದಲ್ಲಿರುವ ಕೋಷ್ಟಕವನ್ನು ಬಳಸಿ:



(ಎ)



(ಬಿ)



(ಸಿ)

| | (ಎ) | (ಬಿ) | (ಸಿ) |
|---|---|---|---|
| ಪಕ್ಷಿಯ ಸುತ್ತಮುತ್ತಲಿನ ಪರಿಸರವನ್ನು ನೀವು ಹೇಗೆ ವಿವರಿಸುತ್ತೀರಿ? | | | |
| ಅದರ ತಲೆ ಮತ್ತು ಕುತ್ತಿಗೆಯನ್ನು ನೀವು ಹೇಗೆ ವಿವರಿಸುತ್ತೀರಿ? ಅವು ಯಾವ ಬಣ್ಣದಲ್ಲಿವೆ? | | | |
| ಕೊಕ್ಕಿನ ಆಕಾರ ಹೇಗಿದೆ? ಅದು ಯಾವ ಬಣ್ಣದಲ್ಲಿದೆ? ಅದು ಭಾರವಾಗಿ ಅಥವಾ ಹಗುರವಾಗಿ ಕಾಣುತ್ತದೆಯೇ? ಅದು ದಪ್ಪವಾಗಿದೆಯೇ ಅಥವಾ ತೆಳುವಾಗಿದೆಯೇ? ಅದು ನೇರವಾಗಿದೆಯೇ ಅಥವಾ ಕೊಂಡಿಯಂತಿದೆಯೇ? | | | |
| ಅದರ ಕಣ್ಣುಗಳ ಬಣ್ಣ ಯಾವುದು? | | | |
| ನಿಮಗೆ ಅದರ ಪಾದಗಳು ಕಾಣಿಸುತ್ತಿವೆಯೇ? ಉಗುರುಗಳು ಹೇಗಿವೆ? | | | |
| ರಣಹದ್ದುಗಳಲ್ಲಿ ನೀವು ಇತರ ಯಾವುದೇ ಕುತೂಹಲಕಾರಿ ಲಕ್ಷಣಗಳನ್ನು ನೋಡಿದಿರಾ? | | | |
| ಚಿತ್ರಗಳಲ್ಲಿ ನಿಮಗೆ ಬೇರೆ ಯಾವುದಾದರೂ ಕುತೂಹಲಕಾರಿ ವಿಷಯಗಳು ಕಂಡುಬಂದಿವೆಯೇ? | | | |
| ನಿಮ್ಮ ಸುತ್ತ ಮುತ್ತ ನೀವು ಈ ರಣಹದ್ದುಗಳನ್ನು ನೋಡಿದ್ದೀರಾ? | | | |


ಚಿತ್ರ ಕೃಪೆ ವಿವರ:

a) Long-billed vultures in a nest. Spotted on the tower of the Chaturbhuj Temple, Orchha, Madhya Pradesh. Credits: Yann Forget, Wikimedia Commons. URL: https://en.wikipedia.org/wiki/File:Vultures_in_the_nest,_Orchha,_MP,_India_edit.jpg. License: CC BY-SA 4.0 International Deed.
b) A slender-billed vulture. Spotted in Mishmi Hills, India. Credits: Mike Prince, Wikimedia Commons. URL: https://commons.wikimedia.org/wiki/File:Slender-billed_Vulture,_Mishmi_Hills,_India_(cropped).jpg. License: CC BY 2.0 Generic Deed.
c) A flock of white-rumped or white-backed vultures gathered near carcass. Spotted in Mangaon, Raigad, Maharashtra, India. Credits: Shantanu Kuveskar, Wikimedia Commons. URL: https://commons.wikimedia.org/wiki/File:White-rumped_vulture_(Gyps_bengalensis)_Flock_gathered_near_carcass_Photograph_by_Shantanu_Kuveskar.jpg. License: CC BY-SA 4.0 International Deed.


ಐ ವಂಡರ್...
ರೀಡಿಸ್ಕವರಿಂಗ್ ಸ್ಕೂಲ್ ಸೈನ್ಸ್


**ಕೊಡುಗೆ:**

**ರಾಧಾಗೋಪಾಲನ್,** ಇವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಾರೆ. ಇವರು ತೆಲಂಗಾಣದ ಕೂಡಲಿ ಇಂಟರ್ ಜನರೇಷನಲ್ ಲರ್ನಿಂಗ್ ಸೆಂಟರ್‌ನ ಸದಸ್ಯರೂ ಆಗಿದ್ದಾರೆ.

ಅನುವಾದ: **ಬಿ. ಆರ್. ಮಂಜುನಾಥ್** | ಪರಿಶೀಲನೆ: **ಯತಿರಾಜ್ ಶರ್ಮ**